ಮೈಸೂರ ಗೆಜೆಟ್ ಚಂದಾದಾರರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತ್, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ್ವ ತಮಾಂ ನೋಟಿಸ್ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ
	ರೂ. ಆ.	ರೂ. ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8.	1 12
ಇಂಗ್ಲಿಷ್ ಮತ್ತು ಕನ್ನಡ ಸುದ್ದಾ 12 ತಿಂಗಳಿಗೆ	7 0	3 8
ಚಫ್ಟಿ ಮಾಹೇ ಯಾ ಕ್ವಾರ್ಟರಿಗೆ		

ದಾಮು ಪಾಯಿ ಪ್ರಕಾರ ದರಗಳು

	ರೂ. ಆ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರಿಗ್ಯುಲೇಷ್ಟ್ ಯಾ ಆಕ್ಟ್ಟುಗಳು ಯಾವದೂ ಇಲ್ಲದಿದ್ದರೆ.	0 8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ನಂಬರ್ಕು 155ನೆ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿದಾರೆಂಬದಾಗಿ ಆಯಾ ತಾಲ್ಲೂಕಾ ಅಮಲ್ದಾರರಿಂದ ಒಂದು ಸರಟಿಫಿಕೇಟನ್ನ ಪಡೆದು ಹಾಜರ್ ಮಾಡಬೇಕಾಗಿರುತ್ತ್.

1895ನೆ ಇಸವಿ ಜೂ೯ 21ನೆ ನಂಬರ್ಕು 24205—6—ಜೆ. 6200ನೆ ನಂಬರ್ ಗವರ್ನಮೆಂಟ್ ಆರ್ಡರ್ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತ್.

1900ನೆ ಇಸವಿ ಆಗಷ್ಟು 21ನೆ ನಂಬರ್ಕು 2633—41 ಮಿಸ್. 558ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್ ಅನುಸರಿಸಿ, ಮೈಸೂರು ದಸರಾ ರೆಪ್ರಜೆಂಟೇಟಿವ್ ಮೆಂಬರುಗಳಾಗಿರುವ ಕಾಲದ ವರಿಗೆ ಮಾತ್ರ ಸದರಿ ಮೆಂಬರುಗಳವರಿಗೆ ಇಂಗ್ಲಿಷ್ ಅಥವಾ ಕನ್ನಡ ಗೆಜೆಟ್ ಅರ್ಧ ಛಾರ್ಜಿಗೆ ಕೊಡಲ್ಪಡುತ್ತೆ.

ಸಿವಿಲ್ ಕೋರ್ಟ್‌ನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರಿಗ್ಯುಲೇಷ್ಟ್ ಅನುಸರಿಸಿ ಸರ್ಟಿಫಿಕೇಟು ಬಗ್ಗೆ ನೋಟಿಸ್‌ಗಳು :—

	ರೂ. ಆ.
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ	2 8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ	1 4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 317ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷ್ಟಗಳ ಬಗ್ಗೆ ನೋಟಿಸ್‌ಗಳಿಗೆ :—

ಮೊದಲನೇ ಸಲಕ್ಕೆ	5 0
ಎರಡನೇ ವ ಆತರುವಾಯ ಪ್ರತಿ ದಫಾಕ್ಕ	2 8

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರೆ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯೂಪ್ಲಿಕೇಟ್ ಕಾಪೀ ಪಟ್ಟಿ ವಗೈರೆ ಕೊಡುವ ಬಗ್ಗೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟಿಸ್‌ಗಳಿಗೆ :—

ಮೊದಲನೇ ಸಲಕ್ಕೆ	ಪುಟ 1ಕ್ಕೆ	10 0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ	,,	5 0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತ್ :—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಟ್ಟಿ 1ಕ್ಕೆ	0 8
ಎರಡನೇ ದಫಾ ಡಿಟೋ	ಡಿಟೋ	0 6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ		0 4

ಪರಾ.—ಗೆಜೆಟ್ ಚಂದಾ ಮತ್ತು ಕೋರ್ಟುಗಳಿಂದ ಕಳುಹಿಸಲ್ಪಡುವ ಪ್ರಕಟಣೆಗಳ ಛಾರ್ಜು ಬಾಬತು ಮೊಬಲಗುಗಳನ್ನು ಸರ್ಕಾರಿ ಖಜಾನೆಗಳು ಜಮೆ ಹಿಡಿಯತಕ್ಕ ಬಗ್ಗೆ ಕಂಟ್ರೋಲರವರ ಅಪ್ಪಣೆ ಆಗಿರುತ್ತೆಯಾದ್ದರಿಂದ ಸದರಿ ಮೊಬಲಗುಗಳನ್ನು ಖಜಾನೆಗೇನೆ ಕಳುಹಿಸಿಕೊಟ್ಟು ಅಲ್ಲಿಂದ ಪಡೆದ ರಶೀತಿಯನ್ನು ಮಾತ್ರ ಆಫೀಸ್ ಮಜಕೂರಿಗೆ ದಾಖಲೆ ಬಗ್ಗೆ ರವಾನಿಸತಕ್ಕದ್ದು. ಮನಿ ಆರ್ಡರ್ ವಗೈರೆ ಕಳುಹಿಸಿಕೊಟ್ಟಲ್ಲಿ ಅಂಗೀಕರಿಸಲ್ಪಡುವದಿಲ್ಲಾ. ವಾಪಸ್ ಮಾಡಲ್ಪಡುತ್ತೆ.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಗ್ಯಾದ ದರಖಾಸ್ತುಗಳು ಮೈಸೂರ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರಿಟೇರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟ್‌ನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ವ ಇಸ್ತಿಹಾರ್‌ನಾಮಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾನ್ಹ 12 ಘಂಟೆ ವಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರಿ ಇಲ್ಲ.

ಸಿ. ಹೆಚ್. ಏಟ್ಸ್,
ಕಂಪೈಲರ್, ಮೈಸೂರ ಗೆಜೆಟ್.